ಶ್ರೀ ಬಿ. ಎಂ. ಶಾಮಣ್ಣಗೌಡರು.—ಈಗ ಎಲ್ಲೆಲ್ಲ ಇನ್ನೂ ಪಾನನಿರೋಧವನ್ನು ಜಾರಿಗೆ ತಂದಿಲ್ಲವೋ ಆ ಪ್ರದೇಶಗಳಲ್ಲೂ ಇದನ್ನು ಜಾರಿಗೆ ತರಲು ತಾವು ಇಚ್ಛೆ ಪಡುತ್ತೀರಾ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದರಲ್ಲಿ ಆ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಬಿ. ಎಂ. ಶಾಮಣ್ಣಗೌಡರು.—ತಾವು ಕೊಟ್ಟಿರತಕ್ಕ ಉತ್ತರದ ಪ್ರಕಾರ ಇದನ್ನು ಜಾರಿಗೆ ತಂದಿರತಕ್ಕ ಕಡೆ ಪೋಲೀಸ್ ಇಲಾಖೆಗೂ ಮತ್ತು ಎಕ್ಸೈಸ್ ಇಲಾಖೆಗೂ ಎಷ್ಟು ಹಣ ಖರ್ಚಾಗಿರುತ್ತೆಂಬುದನ್ನು ತೋರಿಸಿದ್ದೀರಿ. ಆವರೆ ಇಂಥಾಕಡೆ ಪೋಲೀಸಿನವರೇ ಕಾರ್ಯಕ್ರಮವನ್ನು ಕೈಗೊಳ್ಳಬೇಕು, ಇಂಥ ಕಡೆ ಎಕ್ಸೈಜು ಇಲಾಖೆಯವರೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ವಿಧಾಯಕ ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ಇಲಾಖೆಯವರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಈ ಎರಡು ಇಲಾಖೆಗಳನ್ನೂ ಏತಕ್ಕೆ ಒಂದುಗೂಡಿಸಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಕ್ರಮೇಣ ಮಾಡಲಾಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಸಂಬಂಧವಾಗಿ ಪೋಲೀಸ್ ಇಲಾಖೆಯವರು ಏನು ಕೆಲಸ ಮಾಡುತ್ತಾರೆ ಮತ್ತು ಎಕ್ಸೈಜ್ ಇಲಾಖೆಯವರೇನು ಕೆಲಸ ಮಾಡುತ್ತಾರೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವುಗಳನ್ನೆಲ್ಲಾ ಡಿಫೈನ್ ಮಾಡಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅಂದರೆ ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸುತ್ತಿದ್ದಾಗ ಅದನ್ನು ಪತ್ತೆ ಮಾಡತಕ್ಕದ್ದನ್ನು ಎಕ್ಸೈಜು ಇಲಾಖೆಗೂ, ಹಾಗೆ ಅವರು ಪತ್ತೆ ಮಾಡಿದನಂತರ ವಿಚಾರವನ್ನು ಪೋಲೀಸಿಗೆ ತಿಳಿಸಿದಮೇಲೆ ಅವರು ಬಂದು ಅಂಥವರನ್ನು ಅರೆಸ್ಟ್ ಇತ್ಯಾದಿ ಮಾಡುವುದು ಹೀಗೆ ಮಾಡಲಾಗಿದೆಯೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ. ಸಾಧಾರಣವಾಗಿ ಡೈವ ಏರಿಯಾದಲ್ಲಿ ಪೋಲೀಸಿನವರೂ, ವೆಟ್ ಏರಿಯಾದಲ್ಲಿ ಎಕ್ಸೈಜಿನವರೂ ನಿಗಾ ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಎಕ್ಸೈಜ್ ಇಲಾಖೆಯವರು ಕಳ್ಳಭಟ್ಟಿ ಸಾರಾಯಿ ತಯಾರಿಸತಕ್ಕವರನ್ನು ಪತ್ತೆಮಾಡಿದನಂತರ, ಅವರನ್ನು ದಸ್ತಗಿರಿ ಮಾಡಲು ಅವರಿಗೆ ಅಧಿಕಾರವಿದೆಯೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಪೋಲೀಸಿನವರು ಈ ಸಂಬಂಧವಾಗಿ ದಸ್ತಗಿರಿ ಮಾಡುವುದು ಜಾಸ್ತಿ ಆಗುತ್ತದೋ ಅಥವಾ ಎಕ್ಸೈಜ್ ಇಲಾಖೆಯವರು ದಸ್ತಗಿರಿ ಮಾಡತಕ್ಕ ನಿದರ್ಶನಗಳು ಜಾಸ್ತಿ ಇವೆಯೋ?

The Hon'ble Sri H. SIDDAIYA.—It depends upon the area and the number of offenders also.

ಶ್ರೀ ಎಸ್ ರಂಗರಾಮಯ್ಯನವರು.—ಈ ಲಿಸ್ಟಿನಲ್ಲಿ ಇಬ್ಬರ ಹೆಸರು ಯಾರು ಜೆನ್ನಾಗಿ ಕೆಲಸಮಾಡುತ್ತಿದ್ದಾರೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ರೀತಿ ಹೋಲಿಕೆ ಹಾಕಿ ಉತ್ತರ ಕೊಡತಕ್ಕದ್ದು ಸರಿಯಾದ್ದಲ್ಲ.

Appointment of scheduled castes members as Sub Registrars.

Q.—234.—**Sri T. HANUMIAH** (Chitaldrug District—Depressed Class).—Will the Government be pleased to state :—

(*a*) the total number of Sub-Registrars in higher grades in the State (communitywar);

(*b*) whether they will appoint members of the scheduled castes in this Department according to popul tion ?

A.—**The Hon'ble Sri H. SIDDAIYA** (Minister for Revenue and Excise).—

(*a*)—

		Higher Grade.	*Lower Grade.*
1	Brahmins	10	9
2	Vokkaligars	...	7
3	Lingayets	1	4
4	Kurubars	2	1
5	Bedars	...	2
6	Gangakulas	...	1
7	Yadavas	...	1
8	Banajigars	1	...
9	Kunchatigars	...	2
10	Other Caste Hindus ...	...	8
11	Depressed Classes	...	5
12	Muslims	2	7
13	Indian-Christian	...	1
14	Other Communities : Jains ...	...	2
	Total ...	16	50

(*b*) The question will be referred to the Public Service Commission for consideration.